## ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ , ರಟ್ಟೆಹಳ್ಳಿ

**ಕ್ರಿಮಿನಲ್ ಮೊಕದ್ದಮೆ ನಂಃ 297/2018**

**ಸಿ.ಡಬ್ಲ್ಯೂ-19 ಪಿ.ಡಬ್ಲ್ಯೂ-11**

ಸಾಕ್ಷಿಯ ಹೆಸರು ಃಪಂಗನಾಥ ಜಿ ಆರ್

ತಂದೆಯ ಹೆಸರು ಃರಾಜಪ್ಪ

ವಯಸ್ಸು ಃ49 ವರ್ಷ

ಉದ್ಯೋಗ ಃಪಿ ಐ, ಸಿಐಡಿ ಬೆಂಗಳೂರು

ವಾಸಸ್ಥಳ ಃಬೆಂಗಳೂರು .

ದಿನಾಂಕಃ 13-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಜೂನ್ 2017 ರಿಂದ ಮಾರ್ಚ 2018 ಮತ್ತು ಜೂನ್ 2018 ರಿಂದ ಆಗಸ್ಟ 2018 ರವರೆಗೆ ನಾನು ಸಿಪಿಐ ಅಂತಾ ಹಿರೇಕೆರೂರು ವೃತ್ತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 21.02.2018 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಪಡೆದುಕೊಂಡು ಪ್ರಕರಣದ ತನಿಖೆಯನ್ನು ಮುಂದುವರೆಸಿ ಅದೇ ದಿನ ಸಂಜೆ 04 ರಿಂದ 04.30 ರವರೆಗೆ ಚಾಸಾ-1 ರವರು ತೋರಿಸಿದ ಮೇರೆಗೆ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಪೋಲಿಸ್ ಠಾಣಾ ಆವರಣದಲ್ಲಿದ್ದ ಅಪಘಾತಕ್ಕೀಡಾದ ವಾಹನಗಳ ಪಂಚನಾಮೆಯನ್ನು ಜರುಗಿಸಿ ಆ ಕಾಲಕ್ಕೆ 6 ಛಾಯಾ ಚಿತ್ರಗಳನ್ನು ಸೆರೆಹಿಡಿದಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ಹೋಗಿ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಸಂಜೆ 04.45 ರಿಂದ 05.30. ರವರೆಗೆ ಜರುಗಿಸಿ ಆ ಕಾಲಕ್ಕೆ ಒಂದು

ಛಾಯಾಚಿತ್ರವನ್ನು ಸೆರೆಹಿಡಿದಿರುತ್ತೇನೆ. ನಂತರ ಸದರಿ ವಾಹನಗಳ ತಪಾಸಣೆಗಾಗಿ ಚಾಸಾ-12 ರವರಿಗೆ ಪತ್ರವನ್ನು ಕೋರಿಕೊಂಡಿರುತ್ತೇನೆ. ಅದೇ ದಿನ ಚಾಸಾ-1,5 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕ 21.02.2018 ರಂದು ಸದರಿ ಪ್ರಕರಣದಲ್ಲಿ ಮೃತ ಹನುಮಂತಪ್ಪ ಇತನ ಪಿ ಎಂ ವರದಿಯನ್ನು ಪಡೆದುಕೊಂಡು ಹೆಚ್ಚುವರಿ ಅಭಿಪ್ರಾಯಕ್ಕೋಸ್ಕರ ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 25.02.2018 ರಂದು ಸದರಿ ಪ್ರಕರಣದಲ್ಲಿ ಗಾಯಾಳುಗಳಾದ ಚಾಸಾ-1,6 ಮತ್ತು 7 ರವರ ಪಿಡಬ್ಯಾಕ್ ಪಡೆದುಕೊಂಡಿರುತ್ತೇನೆ. ನಂತರ ದಿನಾಂಕ 03.02.2018 ರಂದು ಚಾಸಾ-1,6 ಮತ್ತು 7 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅಪಘಾತಕ್ಕೀಡಾದ ವಾಹನಗಳ ದಾಖಲಾತಿಗಳನ್ನು ಪಡೆದುಕೊಂಡು ನಷ್ಟ ಭರ್ತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಸದರಿ ವಾಹನಗಳನ್ನು ಬಿಡುಗಡೆಗೊಳಿಸಿರುತ್ತೇನೆ. ದಿನಾಂಕ 03.03.2018 ರಂದು ಸದರಿ ಹುದ್ದೆಯಿಂದ ಚುನಾವಣೆ ಪ್ರಯುಕ್ತ ನನಗೆ ವರ್ಗಾವಣೆಯಾದ ಪ್ರಯುಕ್ತ ಪ್ರಕರಣದ ಕಡತವನ್ನು ಚಾಸಾ-18 ರವರಿಗೆ ವಹಿಸಿಕೊಟ್ಟಿರುತ್ತೇನೆ. ನಂತರ ದಿನಾಂಕ 10.06.2018 ರಂದು ಚುನಾವಣೆಯ ನಂತರ ಸದರಿ ಹುದ್ದೆಗೆ ನಾನು ವಾಪಸ್ಸಾಗಿದ್ದು ಸದರಿ ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 24.07.2018 ರಂದು ಮೃತನ ಪಿ ಎಂ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 03.08.2018 ರಂದು ಆರೋಪಿತನ ವಿರುದ್ಧ ಸಾಕಷ್ಟ ಸಾಕ್ಷಾಧಾರಗಳು ದೃಡಪಟ್ಟ ಕಾರಣ ಆರೋಪಿತನ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ವಾಹನ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು.

ಆ ಕಾಲಕ್ಕೆ ಸೆರೆಹಿಡಿದ 10 ಛಾಯಾ ಚಿತ್ರಗಳನ್ನು ಸೆರೆಹಿಡಿದಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳಲ್ಲಿ ಈಗಾಗಲೇ ಎರಡು ಛಾಯಾ ಚಿತ್ರಗಳನ್ನು ನಿ ಪಿ -12 ಮತ್ತು 13 ಎಂದು ಗುರುತಿಸಲಾಗಿರುತ್ತದೆ ಇನ್ನುಳಿದ ಛಾಯಾ ಚಿತ್ರಗಳನ್ನು ನಿ ಪಿ -30 ರಿಂದ ನಿಪಿ -37 ಎಂದು ಗುರುತಿಸಲಾಯಿತು.

ಗುನ್ಹಾ ಜಾಗೆಯ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು.

ಆ ಕಾಲಕ್ಕೆ ಸೆರೆಹಿಡಿದ ಒಂದು ಛಾಯಾ ಚಿತ್ರವನ್ನು ಸೆರೆಹಿಡಿದಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ -2 ಎಂದು ಗುರುತಿಸಲಾಗಿರುತ್ತದೆ.

ಆರೋಪಿತ ನೀಡಿದ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-38 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-38(ಎ) ಎಂದು ಗುರುತಿಸಲಾಯಿತು.

ಚಾಸಾ-1,6 ಮತ್ತು 7 ರವರ ಪಿಡಬ್ಯಾಕಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-21,23,25 ಎಂದು ಗುರುತಿಸಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-21(ಎ),23(ಎ),25(ಎ) ಎಂದು ಗುರುತಿಸಲಾಯಿತು.

ಚಾಸಾ-1,6 ಮತ್ತು 7 ರವರ ಗಾಯದ ಪ್ರಮಾಣ ಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-20,22,24 ಎಂದು ಗುರುತಿಸಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-20(ಎ),22(ಎ),24(ಎ) ಎಂದು ಗುರುತಿಸಲಾಯಿತು.

ಪಿ ಎಂ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-25 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

ಹುಬ್ಬಳ್ಳಿ ಕೀಮ್ಸ ಆಸ್ಪತ್ರೆಯವರು ನೀಡಿದ ಹಿಸ್ಟೋ ಪ್ಯಾಥಾಲೋಜಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-39 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ಶ್ರೀ. ಎಸ್ ಹೆಚ್ ಪಿ ವಕೀಲರಿಂದ:**

ವಾಹನ ಪಂಚನಾಮೆ ಮಾಡಲು ನಮ್ಮ ಸಿಬ್ಬಂದಿಯವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ನಾನು ಯಾವುದೇ ಪಂಚನಾಮೆಗಳನ್ನು ಮಾಡಿರುವುದಿಲ್ಲ ಮತ್ತು ಯಾವುದೇ ಛಾಯಾ ಚಿತ್ರಗಳನ್ನು ಸೆರೆಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1,5 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1,6,7 ರವರ ಪಿಡಬ್ಯಾಕ್ ಮತ್ತು ಗಾಯದ ಪ್ರಮಾಣ ಪತ್ರಗಳನ್ನು

ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ